**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**<u>ಸೆಷನ್ಸ್ ಕೇಸ್ ನಂಃ 8/2025</u>** **<u>ಪಿಡಬ್ಲ್ಯುಃ4</u>**
**<u>ಸಿ.ಡಬ್ಲ್ಯುಃ4</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಬಾಲಸುಬ್ರಹ್ಮಣ್ಯ |
| ತಂದೆಯ ಹೆಸರು | - | ಶಿವಣ್ಣ |
| ವಯಸ್ಸು | - | 62 ವರ್ಷ |
| ಉದ್ಯೋಗ | - | ವ್ಯಾಪಾರ |
| ವಿಳಾಸ | - | ಬನ್ನಂಜೆ |

ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ.2, 3 ಮತ್ತು 5 ರವರ ಪರಿಚಯ ಇರುವುದಿಲ್ಲ. ನನಗೆ ಆರೋಪಿಯ ಪರಿಚಯ ಇಲ್ಲ. ಆತನನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಮೃತ ಪ್ರಶಾಂತ್ ಈತನ ಪರಿಚಯ ಇರುವುದಿಲ್ಲ. ಆತನನ್ನು ಈ ಹಿಂದೆ ನೋಡಿರುವುದಿಲ್ಲ. ಮೃತ ಪ್ರಶಾಂತ್ ಕೊಲೆಯಾಗಿರುವ ವಿಚಾರ ತಿಳಿದಿರುವುದಿಲ್ಲ. ಸದ್ರಿ ಕೊಲೆಯನ್ನು ನಾನು ನೋಡಿರುವುದಿಲ್ಲ. ಆರೋಪಿ ಮೃತ ಪ್ರಶಾಂತನನ್ನು ಕೊಲೆ ಮಾಡಿರುವುದನ್ನು ನಾನು ನೋಡಿದ್ದೇನೆ ಎಂದು ಪೋಲಿಸರಲ್ಲಿ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 22-10-2024 ರ ಬೆಳಿಗ್ಗೆ ನಾನು, ಚಾಸಾ2, 3 ಮತ್ತು 5 ಉಡುಪಿಯ ಹಳೆ ಕೆ ಎಸ್ ಆರ್ ಟಿ ಸಿ ಬಸ್ಸು ನಿಲ್ದಾಣದ ಬಳಿ ನಿಂತು ಮಾತನಾಡುತ್ತಿದ್ದೆವು ಎಂದರೆ ಸರಿಯಲ್ಲ. ಹಾಗೆ ಮಾತನಾಡಿಕೊಂಡು ನಮ್ಮ ಅಂಗಡಿ ಕೋಣೆಯ ಬಳಿ ಬಂದಾಗ ಕೋಣೆಯ ಶಟರ್ ಬಾಗಿಲು ಬಂದ್ ಮಾಡಿ ಒಳಗೆ ಗಲಾಟೆ ಮಾಡಿಕೊಳ್ಳುತ್ತಿರುವುದು ಕೇಳಿಸಿತು ಎಂದರೆ ಸರಿಯಲ್ಲ. ಚಾಸಾ2 ಶಟರ್ ಬಾಗಿಲನ್ನು ಮೇಲಕ್ಕೆ ಎತ್ತಿದಾಗ ಆರೋಪಿ ಪ್ರಶಾಂತನನ್ನು ನೆಲಕ್ಕೆ ಬೀಳಿಸಿ ಆತನ ಎದೆಯ ಮೇಲೆ ಕುಳಿತು ಚಾಕುವಿನಿಂದ ಆತನ ಕುತ್ತಿಗೆಯನ್ನು ಕೊಯ್ಯುತ್ತಿದ್ದ ಎಂದರೆ ಸರಿಯಲ್ಲ. ಆಗ ನಾವೆಲ್ಲರೂ ಬೊಬ್ಬೆ ಹಾಕಿ ಆರೋಪಿಯಲ್ಲಿ ಏಕೆ ಹೀಗೆ ಮಾಡಿದ್ದೀ ಎಂದು ಕೇಳಲಾಗಿ, ಪ್ರಶಾಂತ್ ನನ್ನನ್ನು ಗಲಾಟೆ ಮಾಡಿ ಹೊಡೆಯಲು ಬಂದಿರುತ್ತಾನೆ, ಅದಕ್ಕಾಗಿ ಕೊಲೆ ಮಾಡಿರುತ್ತೇನೆ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ಬೆಳಿಗ್ಗೆ 11-15 ಗಂಟೆಯಾಗಿತ್ತು ಎಂದರೆ ಸರಿಯಲ್ಲ.

2. ಆರೋಪಿಯ ಕೈಯಲ್ಲಿ ಚಾಕು ಇದ್ದು ಅದನ್ನು ಕಂಡು ನಾವು ಭಯಗೊಂಡು ಬೊಬ್ಬೆ ಹೊಡೆದಾಗ ಅಲ್ಲಿ ಜನ ಸೇರಿದ್ದು, ಆಗ ಆರೋಪಿ ಚಾಕುವನ್ನು ನೆಲಕ್ಕೆ ಎಸೆದಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಯ ಕೈ, ಕಾಲುಗಳಿಗೆ, ಮತ್ತು ಬಟ್ಟೆಗಳಿಗೆ ರಕ್ತ ತಾಗಿತ್ತು ಎಂದರೆ ಸರಿಯಲ್ಲ. ನಾವು ಈ ವಿಚಾರವನ್ನು ಪೋಲಿಸರಿಗೆ ತಿಳಿಸಿದ್ಧು ಪೋಲಿಸರು ತಕ್ಷಣ ಸ್ಥಳಕ್ಕೆ ಬಂದು ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಮೃತನ ನಡುವೆ ಹಣ ಕಾಸಿನ ವಿಚಾರಕ್ಕೆ ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಆರೋಪಿ ನಮ್ಮ ಸಮಕ್ಷಮ ಕೊಲೆ ಕೃತ್ಯವನ್ನು ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯ ಭಾಗವನ್ನು

ನಿಪಿ-4 ಎಂದು ಗುರುತಿಸಲಾಯಿತು. ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ. ವಕೀಲರಿಂದಃ -ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ